## ಹತ್ತಿ ಹಾವು

ವರಮಹಾಲಕ್ಷ್ಮಿ ಹಬ್ಬದ ದಿನ ಲಕ್ಷ್ಮಿಯನ್ನು ವಿವಿಧ ಅಲಂಕಾರ ಮಾಡಿ ಮನೆಗಳಲ್ಲಿ ಕೂರಿಸುವುದು ಸಂಪ್ರದಾಯ. ಹೊಸದುರ್ಗದ ಉಷಾ ನಂದಕುಮಾರ್ ಲಕ್ಷ್ಮಿಗಾಗಿ ತಾವೇ ಹತ್ತಿಯಿಂದ ವಿವಿಧ ಅಲಂಕಾರಿಕ ವಸ್ತುಗಳನ್ನು ತಯಾರಿಸುತ್ತಾರೆ. ಅದೇ ರೀತಿ ಅವರು ಲಕ್ಷ್ಮಿಗಾಗಿ ಐದು ಹೆಡೆಗಳ ಹತ್ತಿಯ ಹಾವನ್ನು ತಯಾರಿಸಿದ್ದಾರೆ. ಬಹಳ ಮಂದಿ ಮನೆಗೆ ಬಂದು ಈ 'ಹತ್ತಿ ಹಾವು' ತೋರಿಸಿ ಎಂದು ನೋಡಿಕೊಂಡು ಹೋಗುತ್ತಾರಂತೆ.

**-ವೈಷ್ಣವಿ ಎನ್. ರಾವ್, ಚಿಕ್ಕಮಗಳೂರು**





## ಅಪರೂಪದ ಗಣಪತಿ ಮೂರ್ತಿ

ಆರಾಮವಾಗಿ ಪುಸ್ತಕ ಓದುತ್ತಿರುವ ಈ ಗಣಪತಿ ಮೂರ್ತಿಯನ್ನು ಕಂಡವರು ಮತ್ತೆ ಮತ್ತೆ ನೋಡುವುದರಲ್ಲಿ ಆಶ್ಚರ್ಯವಿಲ್ಲ. ಒಂದು ಕಾಲು ನೀಡಿಕೊಂಡು ಮತ್ತೊಂದನ್ನು ಮಡಿಸಿ, ಒಂದು ಕೈಯಲ್ಲಿ ಪುಸ್ತಕ ಹಿಡಿದು ಮತ್ತೊಂದು ಕೈಯನ್ನು ಪಕ್ಕದಲ್ಲಿ ರಿಸಿಕೊಂಡು, ದಿಂಬನ್ನು ಒರಗಿ ಓದುವುದರಲ್ಲಿ ಮಗ್ನನಾದ ಗಣಪನ ಈ ಮೂರ್ತಿಯನ್ನು ಕಲ್ಪಿಸಿಕೊಂಡು ಕೆತ್ತಿದವರಾರೋ?

ಮಹಾಭಾರತವನ್ನು ಬರೆದಾದ ಮೇಲೆ ಮತ್ತೊಮ್ಮೆ ಕಣ್ಣಾಡಿಸಿ ತಪ್ಪುಗಳಿದ್ದರೆ ತಿದ್ದುವ ಬಯಕೆಯೋ? ಅಥವಾ ಆ ಕಾಲದ ಯಾವುದಾದರೂ ಪ್ರಸಿದ್ಧ ಪುಸ್ತಕವನ್ನು ಓದುವ ಉಮೇದೋ? ಈ ಅಪರೂಪದ ಗಣಪತಿ ಮೂರ್ತಿ ಬೆಂಗಳೂರಿನ ಜಯನಗರ ಐದನೇ ಬ್ಲಾಕ್‌ನಲ್ಲಿರುವ ಅನ್ನಪೂರ್ಣೇಶ್ವರಿ ದೇವಾಲಯದ ಆವರಣದಲ್ಲಿದೆ.

**-ಕೆ. ಪಿ. ಸತ್ಯನಾರಾಯ. ಹಾಸನ**

## ಸತ್ತ ಸೈನಿಕರ ಬೂದಿ ರಾಶಿ!

ಕ್ರಿ.ಶ. 1565 ಜನವರಿ 23ರ ಮಂಗಳವಾರದಲ್ಲಿ ರಕ್ಕಸಗಿ, ತಂಗಡಗಿ ಮತ್ತು ನಾಲತಬಾಡ ಮಧ್ಯೆ ವಿಜಯನಗರದ ಅರಸರಿಗೂ ಮತ್ತು ಐದು ಜನ ಷಾಹಿ ಸುಲ್ತಾನರಿಗೂ ನಡೆದ ನಿರ್ಣಾಯಕ ಯುದ್ಧದಲ್ಲಿ ವಿಜಯನಗರವು ಸೋತು ಒಂದು ಲಕ್ಷಕ್ಕಿಂತಲೂ ಮೇಲ್ಪಟ್ಟು ಸೈನಿಕರು ಕೊಲ್ಲಲ್ಪಟ್ಟರು. ಹತರಾದ ಸೈನಿಕರ ದಹನವು ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ್ ತಾಲ್ಲೂಕಿನ ಬೂದಿಹಾಳೆಯ ಗ್ರಾಮದಲ್ಲಿ ನಡೆಯಿತು. ಈ ದಹನದ ಬೂದಿ ರಾಶಿಯು ಸುಮಾರು ಮೂರು ಎಕರೆ ವಿಸ್ತೀರ್ಣದಲ್ಲಿ ಎರಡು ಆಳು ಎತ್ತರದಲ್ಲಿ ಇದೆ. ಇಲ್ಲಿರುವ ಚಿತ್ರದಲ್ಲಿ ಆ ಬೂದಿರಾಶಿಯನ್ನು ಕಾಣಬಹುದು ಎನ್ನಲಾಗುತ್ತದೆ.

**ಚಿತ್ರ- ಬರಹ:**
**ಕೆ. ಸೂರ್ಯಪ್ರಸಾದ್, ಕಮ್ಮರಡಿ**

